ಓ ಎಸ್ ನಂ 361/2019

ಡಿ. ಡಬ್ಲ್ಯೂ ಃ 1

ದಿಃ 21.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಎಸ್ ಆರ್ ವಕೀಲರಿಂದಃ

ನನ್ನ ತಂದೆಯ ಹೆಸರು ಅಮೀರ್ ಖಾನ್, ನನ್ನ ತಾಯಿಯ ಹೆಸರು ಜುಬೇದ್ ಬಿನ್ ಆಗಿರುತ್ತಾರೆ. ನನ್ನ ತಾತನ ಹೆಸರು ಹಸನ್ ಖಾನ್ ಆಗಿದ್ದು, ಮುಖ್ಯ ವಿಚಾರಣೆಯಲ್ಲಿ ಹೇಳಲಾಗಿರುವ ಹಸನ್ ಖಾನ್ ಯಾರು ಎಂದು ಗೊತ್ತಿರುವುದಿಲ್ಲ. ಹಸನ್ ಖಾನ್ ಮತ್ತು ಹುಸೇನ್ ಖಾನ್ ಎರಡು ನಮ್ಮ ತಾತನ ಹೆಸರುಗಳಾಗಿರುತ್ತವೆ.

ನಮ್ಮ ಕುಟುಂಬ ಸುನ್ನಿ ಕುಟುಂಬಕ್ಕೆ ಸೇರಿರುತ್ತದೆ. ನಮ್ಮ ಸುನ್ನಿ ಮುಸಲ್ಮಾನರ ಕಾನೂನಿನಲ್ಲಿ ಮತ್ತು ಮುಸ್ಲಿಂರ ಕಾನೂನಿನ ಪದ್ದತಿಯಲ್ಲಿ ಒಟ್ಟು ಕುಟುಂಬ ಎನ್ನುವ ಪರಿಕಲ್ಪನೆ ಇರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ಮೂಲ ಇಬ್ರಾಹಿಂ ಸಾಬ್ ರವರ ಹೆಸರಿನಲ್ಲಿತ್ತು. ಇಬ್ರಾಹಿಂ ಖಾನ್ ಹೆಸರಿನಲ್ಲಿದ್ದ ಸ್ವತ್ತನ್ನು ಬಿಟ್ಟು ಬೇರೆ ಯಾವುದೇ ದಾವಾ ಸ್ವತ್ತು ನನ್ನ ತಾತ ಹಸನ್ ಖಾನ್ ರವರ ಹೆಸರಿನಲ್ಲಿರಲಿಲ್ಲ.

ವಾದಿಗೂ ನಮಗೂ ದೊಡ್ಡಪ್ಪ ಚಿಕ್ಕಪ್ಪನ ಮಕ್ಕಳ ಸಂಬಂಧ ಇರುತ್ತದೆ. ದಿನಾಂಕಃ 10.03.1990 ರಲ್ಲಿ ವಿಭಾಗ ಮಾಡಿಕೊಂಡಿದ್ದು ಎಂದು ಹೇಳಿದ್ದು ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆಯೋ ಎಂದರೆ ಸಾಕ್ಷಿ ನಾನು ನ್ಯಾಯಾಲಯಕ್ಕೆ ವಿಭಾಗಪತ್ರವನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಇಬ್ರಾಹಿಂ ಸಾಬ್ ರವರ ಸ್ವಯಾರ್ಜಿತ ಸ್ವತ್ತಾಗಿರುತ್ತದೆ ಎಂದರೆ ಒಟ್ಟು ಕುಟುಂಬದಲ್ಲಿ ಖರೀದಿ ಮಾಡಿದ ಸ್ವತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಇಬ್ರಾಹಿಂ ಸಾಬ್ ರವರ ಸ್ವತ್ತಾಗಿದ್ದು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.